**<u>ದಿನಾಂಕಃ 13-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ</u>- ಪ್ರತಿವಾದಿ ಪರವಾಗಿ ಶ್ರೀ.ಜಿ.ಬಿ.ಹೆಚ್ ವಕೀಲರಿಂದಃ-**

ನನ್ನ ತಂದೆ ವ್ಯವಸಾಯ ಕೆಲಸ ಮಾಡುತ್ತಾರೆ. ಮನೆಯಜಮಾನಿಕೆಯನ್ನು ನಾನೇ ಮಾಡುತ್ತೇನೆ. ನನ್ನ ತಂದೆಗೆ ಯಾವುದೇ ಖಾಯಿಲೆ ಇಲ್ಲ. ಮದುವೆ ಸಮಾರಂಭ, ಸಂತೆಗೆ ನನ್ನ ತಂದೆ ಹೋಗುತ್ತಾರೆ ಎಂದರೆ ಸರಿ. ನನ್ನ ತಂದೆಗೆ ನಾನೊಬ್ಬನೇ ಮಗ. ಈ ದಾವೆಯಾಕಲು ನನ್ನ ತಂದೆ ಮಾಹಿತಿ ಕೊಟ್ಟಿದ್ದಾರೆ. ನನ್ನ ತಂದೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಯಾವತ್ತಿಗೂ ಕೋರ್ಟಿಗೆ ಬಂದಿಲ್ಲ. ನನ್ನ ತಂದೆಯ ಸಹಿಯನ್ನು Forgery ಮಾಡಿಕೊಂಡು ಈ ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಸಹಿಯನ್ನು ನಮ್ಮ ಊರಿನಲ್ಲಿ ನಾನೇ ಹಾಕಿಸಿಕೊಂಡು ಬಂದಿದ್ದ್ಮೇನೆ. ನಮಗೆ ಪಡಿತರ ಚೀಟಿಯನ್ನು ಕೊಟ್ಟಿದ್ದಾರೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ತಂದೆ ಯಜಮಾನ ಎಂದು ತಿಳಿಸಿದೆ ಎಂದರೆ ಸರಿ. ಸುಮಾರು 50 ವರ್ಷದಿಂದ ಪಡಿತರ ಚೀಟಿಯಲ್ಲಿ ನನ್ನ ತಂದೆ ಹೆಸರು ಇದೆ .

ಊರಿನಲ್ಲಿ ನನ್ನ ತಂದೆಗೆ ಪ್ರತ್ಯೇಕವಾದ ವಾಸದ ಮನೆ ಮತ್ತು ಜಮೀನು ಇದೆ ಎಂದರೆ ಸರಿ. ದಾವಾ ಜಮೀನುಗಳು ಹುಣಸೆವಾಡಿ ಗ್ರಾಮದಲ್ಲಿದೆ. ನಮ್ಮ ಊರು ಎಸ್.ಗೊಲ್ಲಹಳ್ಳಿ. ಹುಣಸೆವಾಡಿ ಗ್ರಾಮದಿಂದ ಎಸ್ ಗೊಲ್ಲಹಳ್ಳಿಗೆ ಸುಮಾರು 30 ಕಿ.ಮೀ ಅಂತರವಿದೆ. ನನ್ನ ತಾಯಿ ತೀರಿ ಹೋದಾಗ ನನಗೆ ಸುಮಾರು 30 ವರ್ಷ ವಯಸಾಗಿತ್ತು. ನನ್ನ ತಾಯಿಯ ಮರಣ ಪ್ರಮಾಣ ಪತ್ರ ಇದೆ. ನನ್ನ ತಾಯಿ ತೀರಿಹೋದ ದಿನ, ತಿಂಗಳು, ವರ್ಷ ನೆನಪಿಲ್ಲ. ನನ್ನ ತಾಯಿ ತೀರಿಹೋಗಿ ಸುಮಾರು 30 ವರ್ಷ ಆಗಿದೆ ಎಂದರೆ ಇರಬಹುದು. ನನ್ನ ತಾಯಿಗೆ ಸೇರಿದ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಾತ ನಾಗಣ್ಣನನ್ನು ನೋಡಿಲ್ಲ, ಅಜ್ಜಿ ಪಾರ್ವತಮ್ಮನನ್ನು ನೋಡಿದ್ದೇನೆ. ನನ್ನ ತಾತ ನಾಗಣ್ಣ ಯಾವಾಗ ತೀರಿ ಹೋದರು ಎಂದು ನನಗೆ ಗೊತ್ತಿಲ್ಲ.

ದಾವಾ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ಯಾವ ಯಾವ ಜಮೀನನ್ನು ಯಾವಾಗ ಖರೀದಿ ಮಾಡಿದ್ದಾರೆ ಎಂದು ನನ್ನ ತಂದೆಯವರಿಗೆ ಗೊತ್ತು ನನಗೆ ಗೊತ್ತಿಲ್ಲ. ನನ್ನ ತಂದೆಯವರನ್ನು ಕರೆದುಕೊಂಡು ಬಂದು ವಿಚಾರಣೆ ಮಾಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಹೆಸರಿಗಾಗಲಿ ಅಥವ ನನ್ನ ತಂದೆ ಮತ್ತು ತಾಯಿಯ ಹೆಸರಿಗಾಗಲಿ ಖಾತೆ, ಪಹಣಿ ಮತ್ತು ಕಂದಾಯವನ್ನು ಕಟ್ಟಿಲ್ಲ ಎಂದರೆ ಸರಿ. ನನ್ನ ತಾಯಿ ಮುದ್ದಮ್ಮನಿಗಿಂತ ಸಿದ್ದಗಂಗಪ್ಪ ದೊಡ್ಡವರು. ನನ್ನ ತಾಯಿ ಬದುಕಿರುವಾಗ ಸಿದ್ದಗಂಗಪ್ಪನನ್ನು ಮತ್ತು ತಂದೆ ತಾಯಿಯನ್ನು ಆಸ್ತಿ ಕೊಡು ಎಂದು ಕೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾನಾಗಲಿ ಅಥವ ನನ್ನ ತಂದೆಯಾಗಲಿ ಆಸ್ತಿ ಭಾಗ ಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಸ್ವತಃ ಮುಂದುವರೆದು ಹೇಳುತಾರೆ, ನಾನು ಆಸ್ತಿ ಕೊಂಡಿ ಎಂದು ಹೇಳಿದೆವು ಆದರೆ ಇವತ್ತು, ನಾಳೆ ಎಂದು ಮುಂದೂಡಿರುತ್ತಾರೆ. ಈ ಕೇಸನ್ನು ಹಾಕುವ ಮೊದಲು ಭಾಗ ಕೊಡಿ ಎಂದು ನಾನು ಕೇಳಿದ್ದೇನೆ. ನಾನು ಭಾಗ ಕೇಳಿದ ದಿನಾಂಕ, ತಿಂಗಳು, ವರ್ಷ ನೆನಪಿಲ್ಲ. ಭಾಗ ಕೊಡಿ ಎಂದು ಲಿಖಿತ ನೋಟಿಸ್ ಕೊಟ್ಟಿಲ್ಲ. ಭಾಗ ಕೊಡಿ ಎಂದು ನಾನು ಯಾವುತ್ತು ಕೇಳಿಲ್ಲ ಎಂದರೆ ಸರಿಯಲ್ಲ.

ನಾಗಣ್ಣ ಮತ್ತು ಪಾರ್ವತಮ್ಮನಿಗೆ, ಸಿದ್ದಗಂಗಪ್ಪ ಒಬ್ಬನೇ ಮಗ ಎಂದರೆ ಸರಿ. ಸ್ವತಃ ಮುಂದುವರೆದು ಹೇಳುತ್ತಾರೆ, ಮುದ್ದಮ್ಮ ಎಂಬ ಮಗಳಿದ್ದಾಳೆ. ಸಿದ್ದಗಂಗಪ್ಪ ಚಿಕ್ಕವರಿದ್ದಾಗಲೆ ನಾಗಣ್ಣ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಮನೆಯ ಎಲ್ಲಾ ವ್ಯವಹಾರವನ್ನು ಸಿದ್ದಗಂಗಪ್ಪನವರೆ ಮಾಡುತಿದ್ದರು ಎಂದರೆ ಸರಿಯಲ್ಲ. ಮುದ್ದಗಂಗಮ್ಮ ಮದೆವೆಯಾಗಿನಿಂದ ಗಂಡನ ಮನೆಯಲ್ಲೇ ವಾಸ ಎಂದರೆ ಸುಮಾರು 30 ವರ್ಷಗಳಿಂದ ಹುಣಸೆವಾಡಿಯಲ್ಲಿ ವಾಸ. ಸುಮಾರು 15 ವರ್ಷಗಳಿಂದ ಎಸ್.ಗೊಲ್ಲಹಳ್ಳಿಯಲ್ಲಿ ಮುದ್ದಮ್ಮ ವಾಸವಾಗಿದ್ದರು. ಪಾರ್ವತಮ್ಮ ತೀರಿ ಹೋಗಿ ಸುಮಾರು 10 ವರ್ಷವಾಗಿರಬಹುದು. ಸಿದ್ದಗಂಗಪ್ಪ ತೀರಿಹೋಗಿ ಸುಮಾರು 5 ವರ್ಷ ಆಗಿರಬಹುದು. ಐಟಂ.ನಂ.10 ಜಮೀನನ್ನು ನಾನು ನೋಡಿದ್ದೇನೆ. ಪಾರ್ವತಮ್ಮನವರು ದಿ.29.03.1967 ರಲ್ಲಿ ತಿಮ್ಮಯ್ಯನ ಮಗ

ಹನುಮಯ್ಯನಿಂದ ಐಟಂ.ನಂ.10 ಜಮೀನನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಖರೀದಿ ಮಾಡಿದ ದಿನದಿಂದ ಖಾತೆ, ಪಹಣಿ ಪಾರ್ವತಮ್ಮನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಮಂಗಳಮ್ಮ 1 ನೇ ಪ್ರತಿವಾದಿಯ ಪಾರ್ವತಮ್ಮನ ಸೊಸೆ ಎಂದರೆ ಸರಿ. ದಿ.03.01.2017 ರಂದು ಪಾರ್ವತಮ್ಮನವರು ದಾವಾ ಐಟಂ.ನಂ.10 ಆಸ್ತಿಯನ್ನು ಅವರ ಸೊಸೆ 1 ನೇ ಪ್ರತಿವಾದಿಗೆ ದಾನ ಪತ್ರ ಬೆರೆದುಕೊಟ್ಟಿದಾರೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರದ ಪ್ರಕಾರಣ ಖಾತೆ, ಪಹಣಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ.ನಂ.4 ನ್ನು ನಾನು ನೋಡಿದ್ದೇನೆ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. 1957 ರ ಸಾಲಿನಲ್ಲಿ ದಾವಾ ಐಟಂ.ನಂ.4 ನ್ನು ಚಿಕ್ಕಚೌಡಪ್ಪನ ಮಗ ನಂಜುಂಡಪ್ಪನಿಂದ ಪಾರ್ವತಮ್ಮನವರು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ.03.01.2017 ರಿಂದ ಪಾರ್ವತಮ್ಮನವರು ಮಗ ಸಿದ್ದಗಂಗಪ್ಪನಿಗ ದಾನಪತ್ರ ಬರೆದುಕೊಟ್ಟಿದಾರೆ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರ ಆದ ನಂತರ ಸಿದ್ದಗಂಗಪ್ಪನವರೆ ಆಸ್ತಿಯನ್ನು ಅನುಭವಿಸುತಿದ್ದರು ಎಂದರೆ ಸರಿ. ಅವರು ಸತ್ತ ನಂತರ ಅವರ ಹೆಂಡತಿ ಮಕ್ಕಳು ಮೇಲೆ ಹೇಳಿದ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ.

ದಾವಾ ಐಟಂ.ನಂ.6 ನ್ನು ನಾನು ನೋಡಿದ್ದೇನೆ. ದಾವಾ ಐಟಂ.ನಂ.6 ನ್ನು 1972 ನೇ ಸಾಲಿನಲ್ಲಿ ಪಾರ್ವತಮ್ಮನವರು ನ್ಯಾತಪ್ಪನಿಂದ ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ.03.01.2017 ರಂದು ಪಾರ್ವತಮ್ಮನವರು ಪ್ರೇಮಲೀಲರವರಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರೇಮಲೀಲರವರು ಪಾರ್ವತಮ್ಮನಿಗೆ ಮೊಮ್ಮಗಳಾಗಬೇಕು. ದಾನಪತ್ರದ ಪ್ರಕರಣ ಪ್ರೇಮಲೀಲರವರಿಗೆ ಖಾತೆ, ಪಹಣಿ ಬಂದಿದೆ ಎಂದರೆ ಸರಿಯಲ್ಲ. ದಾನ ಪತ್ರದ ಪ್ರಕಾರ ಪ್ರೇಮಲೀಲರವರು ಜಮೀನನ್ನು ಅನುಭವಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ.ನಂ.4, 6, 10 ಪಾರ್ವತಮ್ಮನವರ ಸ್ವಯಾರ್ಜಿತ ಆಗಿದ್ದು ಅವರ ಇಚ್ಚೆಪ್ರಕಾರ ದಾನ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಕೇಳೋಣ ಬಿಡಿ ಎಂದು

ಉತ್ತರಿಸುತ್ತಾರೆ. ದಾವಾ ಐಟಂ.ನಂ.4, 6, 10 ಆಸ್ತಿಯಲ್ಲಿ ನನಗೆ ಯಾವುದೇ ಭಾಗಾಂಶ ಇಲ್ಲ ಎಂದರೆ ಸರಿಯಲ್ಲ.

ಎಸ್.ಗೊಲ್ಲಹಳ್ಳಿಯಲ್ಲಿ ನಮಗೆ ಸಾಕಷ್ಟು ಆಸ್ತಿ ಇದ್ದು ನಾನು ಮತ್ತು ನನ್ನ ತಂದೆ ಆಸ್ತಿಗಳನ್ನು ಅನುಭವಿಸುತಿದ್ದೇವೆ ಎಂದರೆ ಸರಿಯಲ್ಲ. ಮದುವೆಯಾದ ದಿನದಿಂದ ಮುದ್ದಮ್ಮ ಹುಣಸೆವಾಡಿಯಲ್ಲಿ ವಾಸವಿಲ್ಲ ಎಸ್.ಗೊಲ್ಲಹಳ್ಳಿಯಲ್ಲಿ ವಾಸ ಎಂದರೆ ಸರಿಯಲ್ಲ. ಸಿದ್ದಗಂಗಪ್ಪನಿಗೆ ಪಡಿತರಚೀಟಿ ಇದ್ದು ಅವರುಗಳು ಹುಣಸೆವಾಡಿಯಲ್ಲಿ ವಾಸ ಎಂದರೆ ಸರಿ. ಸಿದ್ದಗಂಗಪ್ಪ ಸಾಯುವ ವರೆಗೂ ಅವರ ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಇಲ್ಲ ಪಾರ್ವತಮ್ಮನೆ ಮನೆಯಮಾನಿಗೆ ಮಾಡುತಿದ್ದರು ಎಂಬುದಕ್ಕೆ ಸಾಕ್ಷಿ ಇದೆ. ಮುದ್ದಮ್ಮ ಮದುವೆಯಾದ ದಿನದಿಂದ ಹುಣಸೆವಾಡಿಯಲ್ಲಿ ಇದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲಿ ಅಥವಾ ನನ್ನ ತಂದೆಯಾಗಲಿ ಜಂಟಿ ಖಾತೆ ಮಾಡಿಕೊಡಿ ಎಂದು ತಾಲ್ಲೋಕು ಕಚೇರಿಗೆ ಅರ್ಜಿಕೊಟ್ಟಿಲ್ಲ.

ನಾಗಣ್ಣ ಸಂತ ನಂತರ ನಾವುಗಳು ಯಾವು ಆಸ್ತಿಯಲ್ಲಿ ಭಾಗ ಕೇಳಿಲ್ಲ ಮತ್ತು ಜಂಟಿ ಸ್ವಾಧೀನದಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಒಡೆದುಕೊಳ್ಳಬೇಕೆಂದು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಸಹಿ/-
ಅಧಿಕ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ